22ನೆಯ ನವೆಂಬರ್ 2013

ಮಾನ್ಯಶ್ರೀ ಸಿದ್ಧರಾಮಯ್ಯರವರೇ,

ಬೆಂಗಳೂರಿಗೆ ಮೆಟ್ರೊಪಾಲಿಟನ್ ಪ್ಲಾನಿಂಗ್ ಕಮಿಷನ್ (ಎಂಪಿಸಿ) ಸ್ಥಾಪಿಸುವ ಕುರಿತು ನಗರಾಭಿವೃದ್ಧಿ ಅಧಿಸೂಚನೆಯ ಕುರಿತಾಗಿ ತಮ್ಮಲ್ಲಿ ವಿನಂತಿಸಿಕೊಳ್ಳುವುದೆಂದರೆ ಅವುಗಳನ್ನು ನಾನು ಪರಿಶೀಲಿಸಿದ್ದು ಮತ್ತು ಇದರ ಬಗ್ಗೆಯೆ ಸಿವಿಕ್, ನಮ್ಮ ಬೆಂಗಳೂರು ಪ್ರತಿಷ್ಠಾನ ಮುಂತಾದ ಅನೇಕ ನಿವಾಸಿ ಅಭಿವೃದ್ಧಿ ಸಂಘ-ಸಂಸ್ಥೆಗಳು ಮತ್ತು ಸರ್ಕಾರೇತರ ಸಂಸ್ಥೆಗಳಿಂದ ಮನವಿಗಳು ನನ್ನನ್ನು ತಲುಪಿವೆ (ಪ್ರತಿಗಳನ್ನು ಲಗತ್ತಿಸಿದೆ). ಈ ಎಂಪಿಸಿ ಕರಡು ನಿಯಮಗಳಲ್ಲಿ ಮೂಲಭೂತ ನ್ಯೂನತೆಗಳಿವೆ ಮತ್ತು ಅದು ಸಂವಿಧಾನದ 74ನೆಯ ತಿದ್ದುಪಡಿಯ ಆಶಯಕ್ಕೆ ವಿರುದ್ಧವಾಗಿದೆ ಎಂಬುದನ್ನು ನಾನೂ ಕೂಡ ಒಪ್ಪುತ್ತೇನೆ.

ಈ ಕರಡು ನಿಯಮಗಳು ಯೋಜನಾ ಪ್ರಕ್ರಿಯೆಗಳಲ್ಲಿ ನಾಗರಿಕ ಸಹಭಾಗಿತ್ವದ ಮತ್ತು 74ನೆಯ ತಿದ್ದುಪಡಿ ಖಚಿತಪಡಿಸುವ ಚುನಾಯಿತ ಪ್ರತಿನಿಧಿಗಳ ಅಧಿಕಾರ ವಿಕೇಂದ್ರೀಕರಣದ ಆಶಯಕ್ಕೆ ಅಸಂಗತವಾಗಿದೆ.

ಕರಡು ನಿಯಮಗಳಲ್ಲಿ ಹಲವಾರು ಬದಲಾವಣೆಗಳನ್ನು ಮಾಡಬೇಕಿದ್ದು ನಾಗರಿಕರ ಈ ಕೆಳಕಂಡ ಕಾಳಜಿಗಳನ್ನು ಪರಿಗಣಿಸಬೇಕು.

1. ಮೇಲ್ನೋಟಕ್ಕೆ ಕರಡು ನಿಯಮಗಳು ಹೈಕೋರ್ಟ್ ಆದೇಶವನ್ನು ನೇರವಾಗಿ ಪಾಲಿಸುತ್ತಿರುವಂತೆ ಕಂಡುಬಂದರೂ ಒಂದು ಸ್ವಾಯತ್ತ, ಸಹಭಾಗಿತ್ವದ ಮತ್ತು ನಾಗರಿಕರಿಗೆ ಉತ್ತರದಾಯಿಯಾದ ಒಂದು ಮಹಾನಗರ ಯೋಜನಾ ಆಯೋಗವನ್ನು ರೂಪಿಸುವಲ್ಲಿ ಸೋತಿದೆ. ಬದಲಿಗೆ, ಈ ಕರಡು ನಿಯಮಗಳು ಯಾವ ಸ್ವತಂತ್ರ ಸಹಭಾಗಿತ್ವವೂ ಇಲ್ಲದೆ ಈಗಿರುವಂತೆಯೇ ಬೆಂಗಳೂರಿನ ಯೋಜನಾ ನಿರೂಪಣೆಯಲ್ಲಿ ರಾಜ್ಯ ಸರ್ಕಾರದ ನಿಯಂತ್ರಣವನ್ನು ಉಳಿಸಿಕೊಂಡಿದೆ.

2. ಕರಡು ನಿಯಮಗಳು ನೈಜ ಸಕ್ರಿಯ ನಾಗರಿಕ ಸಹಭಾಗಿತ್ವಕ್ಕೆ ಅವಕಾಶವನ್ನು ನೀಡುವುದಿಲ್ಲ ಮತ್ತು ಯೋಜನಾ ಪ್ರಕ್ರಿಯೆಗಳಲ್ಲಿ ಅವರ ಪಾಲುದಾರಿಕೆಯಿಲ್ಲದಿರುವುದು ನೇರವಾಗಿ ವಾರ್ಡ್ ಕಮಿಟಿಗಳು, ನಾಗರಿಕರು, ನಿವಾಸಿ ಅಭಿವೃದ್ಧಿ ಸಂಘಟನೆಗಳು ಮತ್ತು ಸರ್ಕಾರೇತರ ಸಂಸ್ಥೆಗಳ ನಿರ್ದಿಷ್ಟ ಪಾತ್ರಗಳನ್ನು ನಿರೂಪಿಸಿರುವ 74ನೆಯ ತಿದ್ದುಪಡಿಯ ಸ್ಪಷ್ಟ ಉಲ್ಲಂಘನೆಯಾಗಿದೆ. ಇದನ್ನು ಮೊದಲು ಸರಿಪಡಿಸಬೇಕು.

3. ಕರಡಿನಲ್ಲಿ ಮುಖ್ಯಮಂತ್ರಿಗಳು, ಶಾಸಕರು ಮತ್ತು ವಿಧಾನ ಪರಿಷತ್ ಸದಸ್ಯರನ್ನು ಎಂಪಿಸಿ ಒಳಗೊಂಡಿದ್ದರೂ ಬೆಂಗಳೂರು ಮಹಾನಗರದ ಅತ್ಯಂತ ದೊಡ್ಡ ಮತ್ತು ಪ್ರಮುಖ ವ್ಯಾಪ್ತಿಯನ್ನು ಪ್ರತಿನಿಧಿಸುವ ಮೇಯರ್ ಮತ್ತು ಬಿಬಿಎಂಪಿ ಕಮಿಷನರ್ ಅವರನ್ನು ಸದಸ್ಯರೆಂದು ಪರಿಗಣಿಸಲಾಗಿಲ್ಲ  ಇದು ಸ್ಥಳೀಯ ಸಂಸ್ಥೆಗಳಿಗೆ

ಸ್ವಾಯತ್ತತೆ ಮತ್ತು ಅಧಿಕಾರ ವಿಕೇಂದ್ರೀಕರಣವನ್ನು ನೀಡದೆ ರಾಜ್ಯ ಸರ್ಕಾರವೆ ಇವುಗಳನ್ನು ಮುಂದೆಯೂ ಹೊಂದುವುದನ್ನು ಸೂಚಿಸುತ್ತದೆ. ಇದು ಮೂರನೆಯ ಹಂತದವರಿಗೆ ಅಧಿಕಾರ ವಿಕೇಂದ್ರೀಕರಣವನ್ನು ನಗರದ ಮೂಲ ವಾರಸುದಾರರಾದ ನಾಗರಿಕರು ಮತ್ತು ನಿವಾಸಿ ಅಭಿವೃದ್ಧಿ ಸಂಘಗಳಿಗೆ ನೀಡುವ 74ನೆಯ ತಿದ್ದುಪಡಿಯ ಆಶಯದ ಮತ್ತು ಅಕ್ಷರಶಃ ಉಲ್ಲಂಘನೆಯಾಗಿದೆ.

4. ಅಭಿವೃದ್ಧಿ ಯೋಜನೆಗಳ ನಿರೂಪಣೆಯ ಸಂದರ್ಭದಲ್ಲಿ ಸರ್ಕಾರೇತರ ಸಂಸ್ಥೆಗಳು ಮತ್ತು ಇತರ ವೃತ್ತಿಪರ ಸಂಸ್ಥೆಗಳನ್ನು ಸಂಪರ್ಕಿಸಬೇಕೆನ್ನುವ ಹಾರಿಕೆಯ ಉಲ್ಲೇಖವನ್ನು ಹೊರತುಪಡಿಸಿ ಮಹಾನಗರದ ನೈಜ ವಾರಸುದಾರರಾದ ನಾಗರಿಕರು ಮತ್ತು ನಿವಾಸಿ ಅಭಿವೃದ್ಧಿ ಸಂಘಟನೆಗಳಿಗೆ ಪ್ರಾತಿನಿಧ್ಯ ನೀಡಲಾಗಿಲ್ಲ.

5. ಎಂಪಿಸಿ ಸ್ಥಾಪನೆಯ ಕರಡು ನಿಯಮಗಳು ಸಾರ್ವಜನಿಕ ಪ್ರಕ್ರಿಯೆಯಾಗಿದ್ದು ಸರಿಯಾದ ರೀತಿಯಲ್ಲಿ ಅಭಿವೃದ್ಧಿ ಪಡಿಸಿದ್ದೇ ಆದಲ್ಲಿ ಅಂತಿಮ ನಿರ್ಧಾರದ ಗುಣಮಟ್ಟವನ್ನು ಹೆಚ್ಚಿಸುವುದಲ್ಲದೆ ಸಂಬಂಧಿಸಿದವರ ಸಹಭಾಗಿತ್ವದಿಂದಾಗಿ ಪ್ರಭಾವಿತ ವರ್ಗವು ಕೂಡ ಮಾಹಿತಿ ಹೊಂದಿರುವುದರಿಂದ ಪರಿಣಾಮಕಾರಿ ನಿರ್ಧಾರಗಳನ್ನು ತೆಗೆದೊಕೊಳ್ಳುವುದು ಸಾಧ್ಯವಾಗುತ್ತದೆ. ಎಂಪಿಸಿಯಲ್ಲಿ ಸಹಭಾಗಿತ್ವದ ಮತ್ತು ಅಭಿಪ್ರಾಯ ವ್ಯಕ್ತಪಡಿಸುವ ಅವಕಾಶ ಅರ್ಥಪೂರ್ಣವಾಗಿರಬೇಕು. ಅದು ಹಾಗಿಲ್ಲದಿದ್ದುದರಿಂದಲೇ ಸಾರ್ವಜನಿಕ ಸಮಾಲೋಚನೆಗಳ ಮತ್ತು ಸಲಹೆ ಸ್ವೀಕರಿಸುವ ಅವಕಾಶ ಪ್ರಾಪ್ತವಾಗಿದ್ದು ನಾಗರಿಕರಿಗೆ ತಿಳಿಯಲೇ ಇಲ್ಲ.

ಈಗಿನ ರೂಪದಲ್ಲಿ ಎಂಪಿಸಿಯು 74ನೆಯ ತಿದ್ದುಪಡಿ ಕಾಯ್ದೆಯಿಂದ ವಿಮುಖವಾಗಿ ತನ್ನ ಸಂವಿಧಾನಬದ್ಧ ಪ್ರಕ್ರಿಯೆಗಳನ್ನು ನಿರ್ವಹಿಸುವಲ್ಲಿ ಸೋಲುತ್ತದೆ. ಆದ್ದರಿಂದ ಕರಡಿನಲ್ಲಿರುವ ಮೂಲಭೂತ ದೋಷಗಳನ್ನು ಸರಿಪಡಿಸಿ ನಾಗರಿಕರ ಮತ್ತು ನಿವಾಸಿ ಅಭಿವೃದ್ಧಿ ಸಂಘಗಳ ಕಾಳಜಿಗಳನ್ನು ಪರಿಗಣಿಸಿ ಅಂತಿಮ ಎಂಪಿಸಿ ಕಾಯ್ದೆಯ ನಿಯಮಗಳ ಅಧಿಸೂಚನೆಗೆ ಒಪ್ಪಿಗೆ ಸೂಚಿಸಬೇಕೆಂದು ತಮ್ಮನ್ನು ಒತ್ತಾಯಿಸುತ್ತೇನೆ. ಇಲ್ಲದಿದ್ದಲ್ಲಿ ರಾಜ್ಯಸರ್ಕಾರವು ತನ್ನ ಜವಾಬ್ದಾರಿಯಿಂದ ಮತ್ತು ಉತ್ತಮ ಆಡಳಿತದ ವಾಗ್ದಾನದಿಂದ ದೂರಸರಿದಿದೆಯೆಂದು ಭಾವಿಸಬೇಕಾಗುತ್ತದೆ.

ತಮ್ಮ ವಿಶ್ವಾಸಿ

**ರಾಜೀವ್ ಚಂದ್ರಶೇಖರ್**

**ಶ್ರೀ ಸಿದ್ಧರಾಮಯ್ಯನವರು**
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ
ವಿಧಾನಸೌಧ, ಬೆಂಗಳೂರು -